ಮಂಡ್ಯ ಜಿಲ್ಲೆಯಲ್ಲಿ ಡೆಂಗ್ಯೂಜ್ವರದ ಪರಿಸ್ಥಿತಿ ಕುರಿತು

4046 (4737) : ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಂಡ್ಯ ಜಿಲ್ಲೆಯಲ್ಲಿ ಡೆಂಗ್ಯೂ ಜ್ವರ ತೀವ್ರತರವಾಗಿರುವುದನ್ನು ಸರ್ಕಾರವು ಮನಗಂಡಿದೆಯೇ;

ಆ) ಇದರ ನಿಯಂತ್ರಣಕ್ಕಾಗಿ ತುರ್ತು ಕ್ರಮ ಕೈಗೊಳ್ಳಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಕ್ರಮ ಕೈಗೊಳ್ಳಲಾಗಿದ್ದಲ್ಲಿ ಅದರ ವಿವರಗಳೇನು?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಮನಗಂಡಿದೆ.

2003ನೇ ಸಾಲಿನಲ್ಲಿ ಜನವರಿಯಿಂದ ಇಲ್ಲಿಯವರೆಗೆ ಮಂಡ್ಯ ಜಿಲ್ಲೆಯಲ್ಲಿ ಒಟ್ಟು 49 ಡೆಂಗ್ಯೂ ಜ್ವರ ಪ್ರಕರಣಗಳು ವರದಿಯಾಗಿದೆ.

ತಾಲ್ಲೂಕುವಾರು ಪ್ರಕರಣಗಳ ವಿವರ:

ಮಂಡ್ಯ ನಗರ –7 ಮಂಡ್ಯ ಗ್ರಾಮಾಂತರ –18, ನಾಗಮಂಗಲ–13, ಮದ್ದೂರು–6, ಮಳವಳ್ಳಿ–4, ಕೆ.ಆರ್.ಪೇಟೆ–7

ಆ) ಬಂದಿದೆ.

ಇ) ಡೆಂಗ್ಯೂ ಜ್ವರ ನಿಯಂತ್ರಣಕ್ಕಾಗಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

1. ಮಂಡ್ಯ ಜಿಲ್ಲೆಯೂ ಸೇರಿದಂತೆ, ಎಲ್ಲಾ ಜಿಲ್ಲೆಗಳಿಗೂ ಮುಂಜಾಗ್ರತಾ ಕ್ರಮವಾಗಿ ಡೆಂಗಿ ಜ್ವರ ತಡೆಗಟ್ಟುವ ನಿಯಂತ್ರಣ ಕ್ರಮಗಳಿಗೆ ಸನ್ನದ್ಧರಾಗಿರುವಂತೆ ಮುನ್ಸೂಚನಾ ಸುತ್ತೋಲೆಗಳನ್ನು ಕಳುಹಿಸಿ, ಎಚ್ಚರಿಸಲಾಗಿದೆ.
2. ಮಂಡ್ಯ ಜಿಲ್ಲೆಯಲ್ಲಿ ಜ್ವರ ಪೀಡಿತರಿಂದ ಇದುವರೆಗೆ 166 ರಕ್ತದ ಮಾದರಿಗಳನ್ನು ಸಂಗ್ರಹಿಸಿ, ರಾಷ್ಟ್ರೀಯ ವೈರಾಣು ಸಂಸ್ಥೆ ಬೆಂಗಳೂರು ಇಲ್ಲಿಗೆ ಪರೀಕ್ಷೆಗಾಗಿ ಕಳುಹಿಸಿಕೊಟ್ಟಿದ್ದು ಇದರಲ್ಲಿ 49 ಮಾದರಿಗಳು ಡೆಂಗಿಜ್ವರ ಪೀಡಿತವೆಂದು ತಿಳಿದು ಬಂದಿರುತ್ತದೆ.
3. ಪ್ರಾಥಮಿಕ ಆರೋಗ್ಯ ಕೇಂದ್ರ / ಆಸ್ಪತ್ರೆಗಳಲ್ಲಿ ಡೆಂಗ್ಯೂ ಜ್ವರ / ಡೆಂಗ್ಯೂ ರಕ್ತಸ್ರಾವ ಜ್ವರ ಪ್ರಕರಣಗಳಿಗೆ ತುರ್ತಾಗಿ ಬೇಕಾಗುವ ನಿರ್ವಹಣಾ ಚಿಕಿತ್ಸೆಗೆ ವ್ಯವಸ್ಥೆ ಮಾಡಲಾಗಿದೆ.
4. ಡೆಂಗ್ಯೂ ಜ್ವರ ತಲೆದೋರಿದ ಪ್ರದೇಶಗಳಲ್ಲಿ ತಾತ್ಕಾಲಿಕ ಚಿಕಿತ್ಸಾ ಕೇಂದ್ರಗಳನ್ನು ತೆರೆದು, ಸೂಕ್ತ ಚಿಕಿತ್ಸೆ ನೀಡಲಾಗುತ್ತದೆ.
5. ಡೆಂಗ್ಯೂ ಜ್ವರ ಹರಡಿರುವ ಪ್ರದೇಶಗಳಲ್ಲಿ, ಕೀಟನಾಶಕದ ಧೂಮೀಕರಣ ಕೈಗೊಂಡು ಸೋಂಕು ಹರಡುವ ಸೊಳ್ಳೆಗಳನ್ನು ನಾಶಪಡಿಸಲಾಗುತ್ತಿದೆ.
6. ಆರೋಗ್ಯ ಕಾರ್ಯಕರ್ತರ ಸಹಾಯದಿಂದ ಮತ್ತು ಕೀಟ ಶಾಸ್ತ್ರಜ್ಞರಿಂದ ಸಮಸ್ಯಾತ್ಮಕ ಪ್ರದೇಶಗಳಲ್ಲಿ ಪ್ರತಿ ಮನೆಗೂ ಭೇಟಿ ನೀಡಿ ರೋಗವಾಹಕ ಸೊಳ್ಳೆಗಳ ಉತ್ಪತ್ತಿ ತಾಣಗಳ ಸಮೀಕ್ಷೆ ನಡೆಸಿ ಅವುಗಳ ನಿರ್ಮೂಲನೆಗಾಗಿ ಕ್ರಮ ಕೈಗೊಳ್ಳಲಾಗಿದೆ.

7. ಮರಣ ಸಂಭವಿಸಿರುವ ಬಗ್ಗೆ ಹಾಗೂ ತುರ್ತು ನಿಯಂತ್ರಣ ಕ್ರಮಗಳನ್ನು ತೆಗೆದುಕೊಳ್ಳುವ ಬಗ್ಗೆ ಮಂಡ್ಯ ಮುನಿಸಿಪಲ್ ಕಮೀಷನರ್‌ರವರಿಗೆ ಕೋರಿದ್ದು, ಜಿಲ್ಲಾ ಮಲೇರಿಯ ಕಛೇರಿಯಿಂದ ಒಬ್ಬ ಆರೋಗ್ಯ ಮೇಲ್ವಿಚಾರಕರನ್ನು ಉಸ್ತುವಾರಿಗಾಗಿ ನಿಯೋಜಿಸಲಾಗಿದೆ.

8. ಆರೋಗ್ಯ ಶಿಕ್ಷಣಕ್ಕಾಗಿ ಭಿತ್ತಿ ಪತ್ರಗಳನ್ನು ಕಿರುಹೊತ್ತಿಗೆಗಳನ್ನು ಮುದ್ರಿಸಿ ಹಂಚಲಾಗುತ್ತಿದೆ ಹಾಗೂ ಈ ರೋಗದ ನಿಯಂತ್ರಣದಲ್ಲಿ ಜನತೆಯ ಪಾತ್ರದ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.

ಬೆಳಗಾವಿ ಜಿಲ್ಲೆಯಲ್ಲಿ ಪ್ರೌಢ ಶಾಲೆಗಳ ಮಂಜೂರಾತಿ ಕುರಿತು

4047 (4580) : ಶ್ರೀ ಭರಮಗೌಡ ಆ ಕಾಗೆ (ಕಾಗವಾಡ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆಯಲ್ಲಿ ಪ್ರಸಕ್ತ ಸಾಲಿನಲ್ಲಿ ಎಷ್ಟು ಸರ್ಕಾರಿ ಪ್ರೌಢ ಶಾಲೆಗಳನ್ನು ಮಂಜೂರು ಮಾಡಲಾಗಿದೆ;

ಆ) ಕಾಗವಾಡ ಮತ ಕ್ಷೇತ್ರದಿಂದ ಸರ್ಕಾರಿ ಪ್ರೌಢ ಶಾಲೆಗಳನ್ನು ಮಂಜೂರಾತಿ ಮಾಡಲು ಬಂದಿದ್ದ ಪ್ರಸ್ತಾವನೆ ಎಷ್ಟು; ಇದರಲ್ಲಿ ಎಷ್ಟು ಮಂಜೂರು ಮಾಡಲಾಗಿದೆ;

ಇ) ಕಾಗವಾಡ ಮತ ಕ್ಷೇತ್ರಕ್ಕೆ ಸರ್ಕಾರಿ ಪ್ರೌಢ ಶಾಲೆಗಳನ್ನು ಮಂಜೂರು ಮಾಡದಿರಲು ಕಾರಣವೇನು?

ಪ್ರೊ: ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು):

ಅ) ಒಂದು ಶಾಲೆಯನ್ನು ಮಂಜೂರು ಮಾಡಿದೆ.

ಆ) ಪ್ರಸ್ತಾವನೆ ಬಂದಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಧಾರವಾಡದಲ್ಲಿ ಸಾಂಸ್ಕೃತಿಕ ಭವನ ಕಟ್ಟಡಕ್ಕೆ ಹಣ ಮಂಜೂರಾತಿ

4051 (4585) : ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) : ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಧಾರವಾಡವು ಕಲಾವಿದರ, ಸಾಹಿತಿಗಳ ಸಂಗೀತಕಾರರ, ಸಾಂಸ್ಕೃತಿಕ ನಗರವಾಗಿರುವುದು ಸರ್ಕಾರ ಗಮನಿಸಿದೆಯೇ?

ಆ) ನಗರದಲ್ಲಿ ಇಲಾಖೆ ವತಿಯಿಂದ ನಿವೇಶನದಲ್ಲಿ ಮುಖ್ಯಮಂತ್ರಿಗಳು ಘೋಷಣೆ ಮಾಡಿರುವ ಸಾಂಸ್ಕೃತಿಕ ಭವನದ ಕಟ್ಟಡಕ್ಕೆ ಹಣ ಬಿಡುಗಡೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳಲಿದೆಯೇ?

ಇ) ಈ ಕಟ್ಟಡವನ್ನು ಎಂದಿನಿಂದ ಪ್ರಾರಂಭಿಸಲಾಗುವುದು. ಸರ್ಕಾರ ಈ ಕಟ್ಟಡಕ್ಕೆ ಎಷ್ಟು ಹಣ ಬಿಡುಗಡೆ ಮಾಡಲಿದೆ.

ಶ್ರೀಮತಿ ರಾಣಿ ಸತೀಶ್ (ಕನ್ನಡ ಮತ್ತು ಸಂಸ್ಕೃತಿ ಸಚಿವರು):

ಅ) ಹೌದು

ಆ) ಹೌದು